ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿಡಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : 114

...ನೇ ವರ್ಷ 24ನೇ ಸಂಚಿಕೆ ಕೊಪ್ಪ 28-1-1990 ಭಾನುವಾರ ಬೆಲೆ 30 ಪೈಸೆ

ಉಚಿತ ಸಾಮೂಹಿಕ ವಿವಾಹ

ಕೊಪ್ಪ : ಇಲ್ಲಿನ ಬಾಳಗಡಿಯ ವಿದ್ಯಾ ಮಹಿಳಾ ಸಮಾಜ ಮತ್ತು ಚೇತನಾ ಯುವತಿ ಮಂಡಳಿಗಳ ಸಂಯುಕ್ತ ಆಶ್ರಯದಲ್ಲಿ ಮಾರ್ಚ್ ಮೊದಲನೇ ವಾರ ಉಚಿತ ಸಾಮೂಹಿಕ ವಿವಾಹ ನಡೆಯುವುದು. ಆಸಕ್ತ ವಧೂವರರು 28-2-90 ರೊಳಗಾಗಿ ಮೇಲ್ಕಂಡ ಸಂಸ್ಥೆಗಳಲ್ಲಿ ತಮ್ಮ ಹೆಸರನ್ನು ನೊಂದಾಯಿಸಬಹುದು. ವಿವಾಹದ ದಿನಾಂಕ ಮತ್ತು ಮುಹೂರ್ತವನ್ನು ಮುಂದೆ ಪ್ರಕಟಿಸಲಾಗುವುದು.

ವಧೂ-ವರರಿಗೆ ತಾಳಿ, ಸೀರೆ, ಖಣ, ಪಂಚೆ, ಧೋತರ, ಹಾರ ಇವನ್ನು ಉಚಿತವಾಗಿ ನೀಡಲಾಗುವುದು. ಕಾಲುಂಗುರ, ಬಾಸಿಂಗ ಬೇಕಿದ್ದವರು ತಾವೇ ತರಬೇಕು. ಪ್ರತಿಯೊಂದು ಜೋಡಿಯ ಕಡೆಯಿಂದ ಗರಿಷ್ಠ 10 ಜನಕ್ಕೆ ಮಾತ್ರ ಊಟದ ವ್ಯವಸ್ಥೆಯಿರುತ್ತದೆ.

ಎರಡನೇ ವಿವಾಹಕ್ಕೆ ಅವಕಾಶವಿಲ್ಲ. ಇದೇ ತಮ್ಮ ಮೊದಲ ವಿವಾಹ ಎಂಬ ಬಗ್ಗೆ ವಧೂವರರು ಆಯಾ ಮಂಡಲ ಪಂಚಾಯ್ತಿಯಿಂದ ದೃಢೀಕರಣ ಪತ್ರ ಒದಗಿಸಬೇಕು.

ಹೆಚ್ಚಿನ ಮಾಹಿತಿಗಳನ್ನು ಬಾಳಗಡಿಯಲ್ಲಿರುವ ಮೇಲ್ಕಂಡ ಸಂಸ್ಥೆಗಳಲ್ಲಾಗಲಿ, ಲ್ಯಾಂಪ್ಸ್ ಸೊಸೈಟಿ, ಮಂಜುನಾಥ ಕ್ಯಾಂಟೀನ್ ಅಥವಾ ಯುವ ಜನ ಸೇವಾಧಿಕಾರಿಗಳಿಂದಾಗಲಿ ಪಡೆಯಬಹುದು.

ಮದ್ಯ ಕಳ್ಳಸಾಗಣೆದಾರರ ಕುತಂತ್ರದಲ್ಲಿ ಲೋಕಾಯುಕ್ತ ಅಧಿಕಾರಿಗಳ ಶಾಮೀಲು ?

ವ॥ಅರಣ್ಯಾಧಿಕಾರಿ ಲೋಕಾಯುಕ್ತದ 'ಬಲೆಗೆ'!

ಬಾಳೆಹೊನ್ನೂರು : ಜ. 20 ರ ಬೆಳಗಿನ ಜಾವ ಇಲ್ಲಿ ಅರಣ್ಯ ಸಿಬ್ಬಂದಿ ಪತ್ತೆ ಹಚ್ಚಿ ವಶಪಡಿಸಿಕೊಂಡಿದ್ದ ಮದ್ಯ ...ಸಾಗಣೆ ಲಾರಿಯ ಮಾಲೀಕರ ಕಡೆಯವರೆನ್ನಲಾದ ವ್ಯಕ್ತಿಗಳು ಕುತಂತ್ರ ನಡೆಸಿ, ಇಲ್ಲಿನ ವಲಯ ಅರಣ್ಯಾಧಿಕಾರಿ ...ರ್ಮಪಾಲ್ ಅವರನ್ನು ಲೋಕಾಯುಕ್ತದ 'ಬಲೆಗೆ' ಕೆಡವಿದ್ದಾರೆಂದು ವರದಿಯಾಗಿದೆ.

...ಂದು ಅನುಮಾನಾಸ್ಪದವೆಂದು ಕಂಡು ...ದ ಮಾರುತಿ ಜೀಪೊಂದನ್ನು ಅರಣ್ಯ ...ಂದಿ ವಶಕ್ಕೆ ತೆಗೆದುಕೊಂಡು, ಅದರ ...ವರು ನೀಡಿದ ಸುಳಿವಿನ ಮೇರೆಗೆ ಎರ... ...ಕಾಲು ಲಕ್ಷ ರೂ. ಬೆಲೆಯ ಮದ್ಯ ...ತ ಲಾರಿಯೊಂದನ್ನು ವಶಪಡಿಸಿಕೊಂಡಿ... ಇಲ್ಲಿ ಸ್ಮರಿಸಬಹುದು. ('ಮುಂಜಾವು' ...-1-90). ಅನಂತರ ಆ ಜೀಪನ್ನು ...ಯ ಅರಣ್ಯಾಧಿಕಾರಿ ಧರ್ಮಪಾಲ್ ...ಕೊಟ್ಟಿದ್ದರು.

...ದರೆ ಈ ಇಡೀ ವ್ಯವಹಾರದ ಹಿಂದಿದ್ದ ... ಅರಸೀಕೆರೆಯ ಕೇಶವಮೂರ್ತಿ ಎಂಬ ಕುಖ್ಯಾತ ಮದ್ಯ ಕಳ್ಳಸಾಗಣೆದಾರನೆನ್ನಲಾಗಿದ್ದು, ಆತ (ಅಥವಾ ಆತನ ಕಡೆಯ ಜನ) ಒಂದು ವಾರದೊಳಗೆ ಧರ್ಮಪಾಲ್‌ರನ್ನು ಲೋಕಾಯುಕ್ತದವರಿಂದ 'ಹಿಡಿಸುವ' ಸವಾಲು ಹಾಕಿ ಹೋಗಿದ್ದನೆನ್ನಲಾಗಿದೆ.

ಅದರಂತೆ ಜ. 22ರ ರಾತ್ರಿ 8 ಗಂಟೆ ಹೊತ್ತಿಗೆ ಮಾರುತಿ ಜೀಪಿನ ಚಾಲಕ ಮತ್ತು ಕಳ್ಳಸಾಗಣೆದಾರನೆನ್ನಲಾದ ವ್ಯಕ್ತಿ ಬಂದು ಜೀಪಿನ ಆರ್. ಸಿ. ಪುಸ್ತಕವನ್ನು ರೇಂಜರ್‌ಗೆ ನೀಡುವ ನೆಪದಲ್ಲಿ ಅದರೊಳಗೆ ಲೋಕಾಯುಕ್ತದವರ ನೋಟುಗಳನ್ನಿಟ್ಟು, ಬಲವಂತವಾಗಿ ಧರ್ಮಪಾಲ್ ಕೈಗೆ ಅದನ್ನು ತುರುಕಿ, ಲೋಕಾಯುಕ್ತ ಇನ್ಸ್‌ಪೆಕ್ಟರ್ ಬೆಂಚಿನ ಮರೆಯವರಿಂದ ಹಿಡಿಸಿದರೆನ್ನಲಾಗಿದೆ.

ಈ ವಿಚಾರ ತಿಳಿದು ಬಾಳೆಹೊನ್ನೂರಿನಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದು, ಪೋಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿದರೆನ್ನಲಾಗಿದೆ. ಕಳ್ಳಸಾಗಣೆದಾರರ ವಿರುದ್ಧ ಕಟ್ಟುನಿಟ್ಟಾಗಿ ಕ್ರಮ ಕೈಗೊಂಡ ಅಧಿಕಾರಿಯ ವಿರುದ್ಧ ಲೋಕಾಯುಕ್ತದ ಅಧಿಕಾರಿಗಳೂ ಶಾಮೀಲಾಗಿ, ಈ ರೀತಿ ನೇಡಿನ ಕ್ರಮ ಕೈಗೊಂಡಿರುವುದನ್ನು ಬಿಜೆಪಿ ಜಿಲ್ಲಾಧ್ಯಕ್ಷ ಬಿ. ಎಸ್. ವಿಠಲರಾವ್ ಖಂಡಿಸಿರುವುದಾಗಿ ಹಾಗೂ, ಈ ರೀತಿ ಅನಗತ್ಯ ಕಿರುಕುಳ ನೀಡುವ ಬಗ್ಗೆ ಅರಣ್ಯ ಸಿಬ್ಬಂದಿ ಮುಷ್ಕರ ನಡೆಸಿದರೆಂದೂ ವರದಿಯಾಗಿದೆ.

ಧರ್ಮಪಾಲ್‌ರನ್ನು ಬಂಧಿಸಿ ಬಿಡುಗಡೆ ಮಾಡಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.

ಜಾನುವಾರು ಗಣತಿ

...ನ. ರಾ. ಪುರ : 14 ನೇ ರಾಷ್ಟ್ರೀಯ ...ಪಂಚವಾರ್ಷಿಕ ಜಾನುವಾರು ಮತ್ತು ... ಉಪಕರಣಗಳ ಗಣತಿ ಕಾರ್ಯ ...16 ರಿಂದ ಫೆ. 14 ರವರೆಗೆ ನಡೆಯ... ...ತಾಲ್ಲೂಕಿನಾದ್ಯಂತ ಎಣಿಕೆದಾರರು ...ಮನೆಗೆ ಭೇಟಿ ನೀಡಿದಾಗ ಸಾರ್ವ... ...ರು ಅವರು ಕೇಳುವ ಎಲ್ಲಾ ಮಾಹಿತಿ... ...ನ್ನು ನೀಡಿ ಸಹಕರಿಸಬೇಕೆಂದು ತಹಸೀ...ರ್ ಕೋರಿದ್ದಾರೆ.

ತಲೆಗೆ 'ಡಿಸ್ಕಸ್' ಬಡಿದ ವಿದ್ಯಾರ್ಥಿನಿ ಗುಣಮುಖ

ಹಿರೇಕೊಡಿಗೆ : ಇಲ್ಲಿನ ಲಾಲ್ ಬಹಾದುರ್ ಶಾಸ್ತ್ರಿ ಪ್ರೌಢಶಾಲೆಯ ವಾರ್ಷಿಕ ಕ್ರೀಡಾ ಸ್ಪರ್ಧೆಗಳನ್ನು ವೀಕ್ಷಿಸುವಾಗ ತಲೆಗೆ 'ಡಿಸ್ಕಸ್' ಬಡಿದು ಪೆಟ್ಟು ತಿಂದಿದ್ದ 8ನೇ ತರಗತಿಯ ಕು| ಶ್ಯಾಮಲ ಮಣಿಪಾಲದ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆಯ ನಂತರ ಇದೀಗ ಗುಣಮುಖಳಾಗುತ್ತಿದ್ದು, ಆಕೆಯನ್ನು ಮನೆಗೆ ಕರೆತರಲಾಗಿದೆ.

ಈಕೆಯ ಚಿಕಿತ್ಸೆಗೋಸ್ಕರ ಶಾಲಾ ವಿದ್ಯಾರ್ಥಿಗಳು ವಾರ್ಷಿಕೋತ್ಸವ ರದ್ದುಪಡಿಸಿ, ಆ ಬಾಬ್ತಿನ 1 ಸಾವಿರ ರೂಗಳನ್ನು ನೀಡಿದ್ದರು. ಶಾಲಾ ಸಮಿತಿಯವರು 500 ರೂ ಗಳನ್ನೂ, ಅಧ್ಯಾಪಕವೃಂದ 250 ರೂ. ಗಳನ್ನೂ ನೀಡಿದ್ದರು. ಕೊಪ್ಪ ಲಯನ್ಸ್‌ನವರು ಆಸ್ಪತ್ರೆ ಶುಲ್ಕ ರಿಯಾಯ್ತಿಗಾಗಿ ಪರಿಚಯ ಪತ್ರ ನೀಡಿದ್ದರು. (ವರದಿ : ಹೊಸ್ಮನೆ ರಮೇಶ್)

ಹಳೇ ವಿದ್ಯಾರ್ಥಿಗಳ ಸಭೆ

ಹರಿಹರಪುರ : ಇಲ್ಲಿನ ಅ. ರಾ. ಶ. ಶಿರಿಯ ಕಾಲೇಜಿನಲ್ಲಿ ಅಧ್ಯಾಪಕರಾಗಿ 28 ವರ್ಷ ಸೇವೆ ಸಲ್ಲಿಸಿ ಈಚೆಗೆ ನಿವೃತ್ತರಾದ ಶ್ರೀ ಕೆ. ಎಸ್. ರಾಮಕೃಷ್ಣ ಉಡುಪರಿಗೆ ಅವರ ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ಬೀಳ್ಕೊಡುಗೆ ಮತ್ತು ಅಭಿನಂದನಾ ಸಮಾರಂಭ ಏರ್ಪಡಿಸುವ ಬಗ್ಗೆ ವ್ಯವಸ್ಥೆ ಮಾಡಲು ಎಲ್ಲ ಹಳೆಯ ವಿದ್ಯಾರ್ಥಿಗಳೂ 4-2-90 ರಂದು ಭಾನುವಾರ ಮಧ್ಯಾಹ್ನ 3 ಗಂಟೆಗೆ ಮಲ್ಲೇಶಯ್ಯನವರ ಛತ್ರದಲ್ಲಿ ಸೇರಬೇಕೆಂದು ಕೋರಲಾಗಿದೆ.

ನ.ರಾ. ಪುರದಲ್ಲೊಂದು 'ಡಾ॥ ಅಂಬೇಡ್ಕರ್ ನಗರ'

ನ. ರಾ. ಪುರ : ಬಹುತೇಕ ಪರಿಶಿಷ್ಟ ಜನಾಂಗದವರ ವಸತಿಯಾದ ಇಲ್ಲಿನ ಜಾಲದ ಹಟ್ಟಿ ಪ್ರದೇಶಕ್ಕೆ, ಜಿಲ್ಲಾ ಪರಿಷತ್ ಆದೇಶದಂತೆ 'ಡಾ॥ ಅಂಬೇಡ್ಕರ್ ನಗರ' ಎಂದು ಹೆಸರಿಡಲಾಗಿದೆ ಜ. 6ರಂದು ತಾ॥ ಕಾಂಗ್ರೆ ಅಧ್ಯಕ್ಷ ಅಬ್ಬಾಸ್ ಸಮದ್ ಅಧ್ಯಕ್ಷತೆಯಲ್ಲಿ ಈ ಸಂಬಂಧ ನಡೆದ ಸಭೆಯಲ್ಲಿ ಶಾಸಕ ಯು.ಕೆ. ಶಾಮಣ್ಣ ಈ ಹೊಸ ಹೆಸರಿನ ನಾಮ ಫಲಕ ಅನಾವರಣ ಮಾಡಿದರು. ವಿಭಾಗ ಚಂದ್ರಶೇಖರ್ ಮತ್ತು ಪುರಸಭೆಯ ಸ್ಥಳೀಯ ಸದಸ್ಯ ಎಚ್. ಮಲ್ಲಯ್ಯ ಮುಖ್ಯ ಅತಿಥಿಗಳಾಗಿದ್ದು, ಸತ್ಯಪ್ರಕಾಶ್ ಡಾ|ಅಂಬೇಡ್ಕರ್ ಕುರಿತು ಮಾತನಾಡಿದರು. ರಮೇಶ್ ಸ್ವಾಗತಿಸಿ, ತಾ॥ ದ ಸಂ. ಸ. ಸಂಚಾಲಕ ಎಚ್. ಎಂ. ಶಿವಣ್ಣ ವಂದಿಸಿದರು.

ಗಾಂಧೀಜಿ ಮತ್ತು ಆತ್ಮ ಸಾಕ್ಷಿ

...ನರಿಕಟ್ಟೆ: ಗಾಂಧೀಜಿಯವರು ಆಫ್ರಿಕಾ... ಭಾರತಕ್ಕೆ ಬಂದಾಗ ಸ್ವಾತಂತ್ರ್ಯ... ...ವಳಿಗಾರರು ಅವರಿಗೆ, ತಮ್ಮ ನಾಯಕ... ...ು ಒತ್ತಾಯಿಸಿದಾಗ, "ನಾನು ಭಾ... ...ನ್ನೊಮ್ಮೆ ಸುತ್ತಿ ನೋಡುವೆ ಆಮೇಲೆ ನನಗೆ ಯೋಗ್ಯತೆಯಿದೆ ಎಂದು ನನ್ನ ಆತ್ಮ ಸಾಕ್ಷಿ ಒಪ್ಪಿದರೆ ನಾಯಕನಾಗುವೆ" ಎಂದರಂತೆ. ನಾವಿಂದು ಹಾಗಿದ್ದೇವೆಯೇ ಎಂದು ಇಲ್ಲಿನ ಸದ್ಗುರು ಪ್ರೌಢಶಾಲೆಯ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪರಿಷತ್ ಅಧ್ಯಕ್ಷ ಬಿ. ಎಲ್. ರಾಮದಾಸ್ ಪ್ರಶ್ನಿಸಿದರು.

ಉಪ ಪ್ರಾಂಶುಪಾಲರಾದ ಶೃಂಗೇರಿ ಕಾಲೇಜಿನ ಉಪನ್ಯಾಸಕರಾದ ಎ. ಕೆ. ಭಟ್ ಮತ್ತು ತಾ॥ ಯುವಜನ ಸೇವಾಧಿಕಾರಿ ಕರುಣಾಕರ ಶೆಟ್ಟಿ ಮುಖ್ಯ ಅತಿಥಿಗಳಾಗಿದ್ದರು. ಶಾಲಾ ವರದಿಯನ್ನು ಮುಖ್ಯೋಪಾಧ್ಯಾಯರಾದ ಬಿ.ಸಿ. ಶ್ರೀನಿವಾಸ್ ಮಂಡಿಸಿದರು. ಶಿಕ್ಷಕ ಕೃಷ್ಣಮೂರ್ತಿ ಸ್ವಾಗತಿಸಿದರು.

ಭೂಮಿಗಾಗಿ ದಲಿತರ ಧರಣಿ

...ಕೊಪ್ಪ : ರಾಜ್ಯಾದ್ಯಂತ ದಲಿತರ ... ಇತರ ಭೂ ರಹಿತರ ಬಗರ್‌ಹುಕುಂ ...ವಳಿಗಳನ್ನು ಖಾಯಂ ಗೊಳಿಸಲು ... ಇನ್ನಿತರ ಭೂಮಿಯ ಹಕ್ಕುಗಳ... ...ಒತ್ತಾಯಿಸಿ ದಲಿತ ಸಂಘರ್ಷ ಸಮಿ... ...ರಾಜ್ಯಾದ್ಯಂತ ಜ. 30 ಮತ್ತು 31 ...ತಾ॥ ಕಛೇರಿಗಳ ಮುಂದೆ ಧರಣಿ ...ಗ್ರಹ ನಡೆಸಲಿದೆ.

ಓದುಗರ ಪತ್ರ

ಕೆಸವೆ ರಸ್ತೆಗೆ ಟಾರ್ : ವಸ್ತು ಸ್ಥಿತಿ

ಪ್ರಿಯರೆ,

ನಿಮ್ಮ 14 1 90ರ ಸಂಚಿಕೆಯಲ್ಲಿ ಕೆಸವೆ ರಸ್ತೆಗೆ ಟಾರಿನ ಬಗೆಗೆ ಕೆ.ಎಸ್. ಶಾಂತಾರಾಂ ಅವರ ಪತ್ರ ಓದಿ ಗ್ರಾಮಸ್ಥರಿಗೆ ತುಂಬಾ ಆಶ್ಚರ್ಯವಾಗಿದೆ.

ಈ ರಸ್ತೆಗೆ 1983ರಿಂದೀಚೆಗೆ 4 ಕಿ.ಮೀ.ನಷ್ಟು ಟಾರ್ ಆಗಿದೆ. ಈ ಪೈಕಿ 1987–88ರಲ್ಲಿ ಟಾರು ಮಂಜೂರಾಗಿದ್ದ 1 ಕಿ.ಮೀ. ರಸ್ತೆ ಟಾರ್ ಹಾಕಲಾಗದಷ್ಟು ದುಃಸ್ಥಿತಿಯಲ್ಲಿದ್ದುದರಿಂದ, ಗ್ರಾಮಸ್ಥರ ಕೋರಿಕೆಯಂತೆ ಕೂಡಲೇ 25 ಸಾವಿರ ರೂ. ವೆಚ್ಚದಲ್ಲಿ ಪುನಃ ಜಲ್ಲಿ ಹಾಕಿಸಲಾಯಿತು. ಅನಂತರ ಟಾರ್ ಕೊರತೆ ಮುಂತಾದ ಕಾರಣಗಳಿಂದ ನಿಲುಗಡೆಯಾಗಿದ್ದ ಕೆಲಸವೇ (ಅದೇ 1987–88ರಲ್ಲಿ ಮಂಜೂರಾಗಿದ್ದುದೇ) ಈಗ ಆಗಿದೆ ಹೊರತು ಹೊಸದಾಗಿ ಯಾರೂ ಈ ರಸ್ತೆಗೆ ಟಾರ್ ಮಂಜೂರು ಮಾಡಿಸಿದ್ದಲ್ಲ.

ಇಷ್ಟೇ ಅಲ್ಲದೆ, ಕೊಂಡಗುಳಿ ಮತ್ತು ಕಾಡಕೆರೆ ಸಮೀಪ ತಲಾ ಒಂದೊಂದು ಕಿ.ಮೀ. ರಸ್ತೆಗೆ ಪುನಃ ಜಲ್ಲಿ ಆಗಿದೆ. ಗಾಡಿಕೆರೆ ಉಬ್ಬು ಮತ್ತು ಕಾಡಕೆರೆ ತಿರುವಿನಲ್ಲಿ ತೀರಾ ನಾದುರಸ್ತಾಗಿದ್ದ ರಸ್ತೆಯನ್ನು ಗ್ರಾಮಸ್ಥರ ಮನವಿ ಮೇರೆಗೆ ದುರಸ್ತಿ ಮಾಡಿಸಲಾಗಿದೆ. ಈ ರಸ್ತೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಕೂಡ ಕಡತ ತಯಾರಾಗಿ, ಸಂಬಂಧಪಟ್ಟ ಅಧಿಕಾರಿಗಳ ಪರಿಶೀಲನೆಯಲ್ಲಿದೆ.

ಇಷ್ಟೆಲ್ಲ ಕಾಮಗಾರಿ ಮಾಜಿ ಶಾಸಕ/ಮಂತ್ರಿ ಗೋವಿಂದಗೌಡರು ವಿಶೇಷ ಮುತುವರ್ಜಿ ವಹಿಸಿ ಮಾಡಿಸಿಕೊಟ್ಟಿದ್ದು ಗ್ರಾಮಸ್ಥರಿಗೆಲ್ಲ ಗೊತ್ತಿದೆ.

ಹೀಗಿದ್ದೂ ಸಹ, ಮಂಡಲದ ಉಪಪ್ರಧಾನರಂಥ ಜವಾಬ್ದಾರಿ ಸ್ಥಾನದಲ್ಲಿರುವ ಶಾಂತಾರಾಂರವರು ಸತ್ಯವನ್ನೆಲ್ಲ ವಿನಾಕಾರಣ ಮರೆ ಮಾಚಿ ಜನರಲ್ಲಿ ತಪ್ಪು ಅಭಿಪ್ರಾಯ ಮೂಡಿಸಲು ಯತ್ನಿಸುವುದರಲ್ಲಿ ಅರ್ಥವಿಲ್ಲ.

ನೂತನ ಶಾಸಕರಾದ ಶಾಮಣ್ಣನವರೂ ಸಹ ಇದೇ ರೀತಿ ಆಸಕ್ತಿ ವಹಿಸಿ, ಈ ರಸ್ತೆಗೆ ಶೀಘ್ರವೇ ಪೂರ್ತಿಯಾಗಿ ಟಾರ್ ಹಾಕಿಸಲಿ ಎಂಬ ಶ್ರೀಯುತರ ಮನವಿಯನ್ನು ಮಾತ್ರ ಗ್ರಾಮಸ್ಥರು ಸಂಪೂರ್ಣವಾಗಿ ಬೆಂಬಲಿಸುತ್ತೇವೆ.

—ಗ್ರಾಮಸ್ಥರ ಪರವಾಗಿ,
ಎಚ್.ಎಸ್. ಕಳಸಪ್ಪ,
ಮತ್ತು ಇತರರು, (6 ಜನರ ಸಹಿ)
ಕೆಸವೆ–ಕೊಪ್ಪ

ಗಿರಿಜನರಿಗೆ ಸಹಕಾರಿ ತರಬೇತಿ ಶಿಬಿರ

ಕಮ್ಮರಡಿ: ಗಿರಿಜನರಿಗೆ ಸಹಕಾರಿ ಶಿಕ್ಷಣ ಶಿಬಿರವು ಇಲ್ಲಿ ಜ. 8ರಿಂದ 13ರವರೆಗೆ ನಡೆಯಿತು. 'ಲ್ಯಾಂಪ್ಸ್' ಅಧ್ಯಕ್ಷ ಕೆ. ಎಸ್. ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಜಯರಾಂ ಜೋಯ್ಸ್ ಶಿಬಿರ ಉದ್ಘಾಟಿಸಿದರು. ಪಾಂಡುನಾಯ್ಕ್, ಕೆ. ಕೃಷ್ಣಪ್ಪ ಮುಖ್ಯ ಅತಿಥಿಗಳಾಗಿದ್ದರು. ಕೆ.ಎಸ್. ಶ್ರೀನಿವಾಸ್ ಅಧ್ಯಕ್ಷತೆಯ ಮುಕ್ತಾಯ ಸಮಾರಂಭದಲ್ಲಿ ಕೆ. ಕೃಷ್ಣಪ್ಪ, ಎ ಎನ್. ಕರಿಯಪ್ಪ, ಡಾ. ಸುರೇಶ್ ನಾಯಕ್ ಮುಖ್ಯ ಅತಿಥಿಗಳಾಗಿದ್ದರು. ನರಸಿಂಹ ಸ್ವಾಮಿ ಸ್ವಾಗತಿಸಿ, ಮಂಜುನಾಥ್ ವಂದಿಸಿದರು.

ಬೀಳ್ಕೊಡುಗೆ

ಕೊಪ್ಪ : ಇಲ್ಲಿನ ಅಂಚೆ ಕಛೇರಿಯಲ್ಲಿ ತನಿಖಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಕೆ.ಎಸ್. ಅನಂತರಾಂ ಅವರಿಗೆ ಕಳಸಕ್ಕೆ ವರ್ಗವಾದ ಸಂದರ್ಭದಲ್ಲಿ ಅಂಚೆ ಮನರಂಜನಾ ಕೂಟದ ವತಿಯಿಂದ ಅವರನ್ನು ಜ 9ರಂದು ಪೋಸ್ಟ್ ಮಾಸ್ಟರ್ ಪಿ.ಎಸ್. ಚಡಗ ಅವರ ಅಧ್ಯಕ್ಷತೆಯಲ್ಲಿ ಬೀಳ್ಕೊಡಲಾಯಿತು. ನೂತನ ಇಲಾಖಾ ತನಿಖಾಧಿಕಾರಿ ಎಂ. ನಾಗೇಶ್ ಅವರನ್ನು ಸ್ವಾಗತಿಸಲಾಯಿತು. ಕೆ. ಎಸ್. ಕೇಶವ ಸ್ವಾಗತಿಸಿ ರವೀಂದ್ರನಾಥ ರೆಡ್ಡಿ ವಂದಿಸಿದರು.

ರಾ॥ ಯುವ ದಿನ ಸ್ಪರ್ಧೆಗ

ಕುದುರೆಗುಂಡಿ : ಇಲ್ಲಿಗೆ ಸಮೀ ಕಮಲಾಪುರದಲ್ಲಿ ಸರ್ವೋದಯ ಯು ರೈತ ಸಂಘ ಮತ್ತು ನೆಹರು ಯು ಕೇಂದ, ಇವರ ಸಂಯುಕ್ತ ಆಶ್ರಯ ಜ. 15 ರಂದು ರಾಷ್ಟ್ರೀಯ ಯುವ ಮತ್ತು ಯುವ ಸಪ್ತಾಹದ ಅಂಗವ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರ ಗಳ ಸ್ಪರ್ಧೆಯ ಉದ್ಘಾಟನೆಯನ್ನು ಮ ವೆಂಕಟಪ್ಪ ಗೌಡರ ಅಧ್ಯಕ್ಷತೆಯಲ್ಲಿ ಆನ ರಾವ್ ನೆರವೇರಿಸಿದರು. ಶರಾವತಿ ಸ ತಿಸಿ, ಸತ್ಯನಾರಾಯಣ ವಂ ದರು.

ನಂತರ ಸಾಂಸ್ಕೃತಿಕ ಸ್ಪರ್ಧೆ ಹಾಗೂ ದೈಹಿಕ ಶಿಕ್ಷಕರಾದ ನೋ ಗೌಡರ ನೇತೃತ್ವದಲ್ಲಿ ಕ್ರೀಡಾ ಸ್ಪ ಗಳು ನಡೆದವು. ಸೀತೂರು ಮಂ ಪ್ರಧಾನರಾದ ಗೋಪಾಲರಾವ್ ಅ ಕ್ಷತೆಯಲ್ಲಿ ನಡೆದ ಮುಕ್ತಾಯ ಸ ರಂಭದಲ್ಲಿ ಉಪಪ್ರಧಾನ ನಾರಾಯ ಸ್ವಾಮಿ ಬಹುಮಾನ ವಿತರಿಸಿದರು. ಸ ಘ ಅಧ್ಯಕ್ಷರಾದ ರಾಧಾಕೃಷ್ಣ ಸ್ವಾಗ ಸತ್ಯನಾರಾಯಣ ವಂದಿಸಿದರು.

ಶಂಕು ಸ್ಥಾಪನೆ

ಶೃಂಗೇರಿ : ಇಲ್ಲಿಗೆ ಸಮೀಪ ಉ ಬೈಲು ಜೈ ಶಂಕರ್ ಯುವಕ ರೈತ ಸಂ ರಂಗ ಮಂದಿರದ ಶಂಕು ಸ್ಥಾಪನೆಯ ಜ. 22ರಂದು ಸಂಘದ ಅಧ್ಯಕ್ಷ ಎಂ ವೆಂಕಟೇಶ್ ನೆರವೇರಿಸಿದರು.

ರಾ॥ ಯುವ ಸಪ್ತಾಹ

ನರಸಿಂಹರಾಜಪುರ : ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ ಜ. 12ರಿಂದ 18ರವರೆಗೆ ಸ್ವಾಮಿ ವಿವೇಕಾನಂದರ ಜನ್ಮ ದಿನೋತ್ಸವವನ್ನು ರಾಷ್ಟ್ರೀಯ ಯುವ ಸಪ್ತಾಹವಾಗಿ ಆಚರಿಸಲಾಯಿತು. ಇದರ ಅಂಗವಾಗಿ ಜ. 13ರಂದು ರಾ.ಸೇ.ಯೋ. ವಿದ್ಯಾರ್ಥಿ-ವಿದ್ಯಾರ್ಥಿನಿಯರು ಶ್ರಮದಾನ ನಡೆಸಿ ಸಿರಗಳಲೆ ಗ್ರಾಮದ ರಸ್ತೆ ದುರಸ್ತಿ ನಡೆಸಿದರು. 14ರಂದು ವಿವಿಧ ಆಟೋಟ ಸ್ಪರ್ಧೆಗಳನ್ನು ನಡೆಸಲಾಯಿತು.

ಜ. 18ರಂದು ಪ್ರಿನ್ಸಿಪಾಲ್ ಡಿ ರಾಘವೇಂದ್ರ ಗುರು ಅವರ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೆ. ವಿ. ಬಾಲಕೃಷ್ಣ ರವರು ವಿವೇಕಾನಂದರ ಜೀವನ ಧರ್ಮ ಮತ್ತು ವಿದೇಶ ಪ್ರವಾಸದ ಬಗ್ಗೆ ವಿವರವಾಗಿ ಉಪನ್ಯಾಸ ನೀಡಿದರು. ಸಹಾಯಕ ಕೃಷಿ ನಿರ್ದೇಶಕರಾದ ಬಿ. ಎನ್. ರಾಘವೇಂದ್ರರವರು ಯುವ ಶಕ್ತಿಯ ಸೂಕ್ತ ಬಳಕೆಗೆ ಕರೆ ನೀಡಿದರು.

(ವರದಿ : ನವಿಲೂರು ಪ್ರಕಾಶ್)

ರಾಘವ ನಿಧನ

ಹರಿಹರಪುರ: ಕೊಪ್ಪ ಬಿಡಿಒ ಕಛೇರಿಯಲ್ಲಿ ಗುಮಾಸ್ತರಾಗಿದ್ದ ರಾಘವ ಜ. 19ರ ಸಂಜೆ 4.30ರಲ್ಲಿ ಇಲ್ಲಿನ ಸಾರಾಯಿ ಅಂಗಡಿಯೊಂದರಲ್ಲಿ ಹಠಾತ್ ಹೃದಯಾಘಾತದಿಂದ ನಿಧನರಾದರು. 42 ವರ್ಷದ ಇವರು, ಅಂತರ್ಜಾತಿ ವಿವಾಹಿತರಾಗಿದ್ದು, ಪತ್ನಿ ಮತ್ತು 3 ಗಂಡು ಮಕ್ಕಳನ್ನು ಅಗಲಿದ್ದಾರೆ.

ಹಣ್ಣು, ತರಕಾರಿ ಸಂಸ್ಕರಣೆ ಶಿಬಿರ

ಕೊಪ್ಪ : ಇಲ್ಲಿನ ಸಿಂಡಿಕೇಟ್ ಬ್ಯಾಂಕ್, ಜೇಸೀಸ್ ಮತ್ತು ಕೃಷಿ ವಿಚಾರ ವಿನಿಮಯ ಕೇಂದ್ರಗಳು ಸಂಯುಕ್ತವಾಗಿ ಜ. 23ರಂದು ಇಲ್ಲಿ ಮಹಿಳೆಯರಿಗೋಸ್ಕರ ಏರ್ಪಡಿಸಿದ್ದ ಹಣ್ಣು ಮತ್ತು ತರಕಾರಿ ಸಂಸ್ಕರಣ ಶಿಬಿರದಲ್ಲಿ ಮೂಡಿಗೆರೆಯ ಕೃಷಿ ವಿಜ್ಞಾನ ಕೇಂದ್ರದ ತರಬೇತಿ ಸಂಘಟಕರಾದ ಟಿ. ಸಿ ನಾರಾಯಣ ಸ್ವಾಮಿಯವರ ನೇತೃತ್ವದಲ್ಲಿ ತಜ್ಞರುಗಳಾದ ಸೋಮಶೇಖರ್, ಜಿ ಆರ್. ಪಿ. ಸ್ವಾಮಿ ಮತ್ತು ಸಿ ಕೆ ಬಾಲಚಂದ್ರ, ಹಣ್ಣಿನ ಜಾಮ್, ಕೆಚಪ್ ಮತ್ತು ಸ್ಕ್ವಾಷ್ ತಯಾರಿಸುವ ವಿಧಾನವನ್ನು ತೋರಿಸಿಕೊಟ್ಟರು.

ಒಂದು ದಿನದ ಈ ತರಬೇತಿ ಕಾರ್ಯಕ್ರಮದಲ್ಲಿ ಕೊಪ್ಪ ಮತ್ತು ಸನಿಹದ ಗ್ರಾಮೀಣ ಪ್ರದೇಶಗಳಿಂದ 37 ಮಹಿಳೆಯರು ಹಾಗೂ ಕೃಷಿ ವಿಚಾರ ವಿನಿಮಯ ಕೇಂದ್ರ ಮತ್ತು ಜೇಸೀಸ್ ಸಂಸ್ಥೆಯ ಸದಸ್ಯರುಗಳು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದರು. ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಬಿ. ಆರ್. ಪೂಜಾರಿ-ಸ್ವಾಗತಿಸಿ ಕಾರ್ಯಕ್ರಮದ ಉದ್ದೇಶ ವಿವರಿಸಿದರು. ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಹಾಗೂ ಜೇಸೀಸ್ ಕಾರ್ಯದರ್ಶಿ ಶ್ರೀಕಾಂತ ಶೆಣೈ ವಂದಿಸಿದರು.

ಪ್ರತಿಷ್ಠಾಪನೆ, ರಥೋತ್ಸವ

ತರೀಕೆರೆ: ನಾಡಿನ ಪ್ರಖ್ಯಾತ ದೇವಾಲಯಗಳಲ್ಲೊಂದಾದ ತರೀಕೆರೆಯ ಸುಬ್ರಹ್ಮಣ್ಯಸ್ವಾಮಿ ಪ್ರತಿಷ್ಠಾಪನೆ ಜ. 31ರಂದು ಹಾಗೂ ರಥೋತ್ಸವವು ಫೆ. 1ರಂದು ನಡೆಯುವುದು 5 ಲಕ್ಷ ರೂ ಅಂದಾಜಿನಲ್ಲಿ ದೇವಾಲಯದ ಬೃಹತ್ ಯೋಜನೆ ರೂಪಿತವಾಗಿದ್ದು ಈಗ ಒಂದೂವರೆ ಲಕ್ಷ ರೂ. ವೆಚ್ಚದಲ್ಲಿ ದೇವಾಲಯದ ಒಂದು ಹಂತ ಪೂರ್ಣಗೊಂಡಿದೆ ದೇವಾಲಯದ ನಿರ್ಮಾಣ ಕಾರ್ಯ ಮುಂದುವರಿಯಲು ಭಕ್ತರು ಹೆಚ್ಚಿನ ರೀತಿಯಲ್ಲಿ ಸಹಕರಿಸಲು ಪತ್ರಕರ್ತ ಅಂಚಿ ನಾಗಭೂಷಣ್ ಕೋರಿದ್ದಾರೆ.

ಬಸರಿಕಟ್ಟೆಯಲ್ಲಿ ತ್ಯಾಗರಾಜರ ಆರಾಧನೆ

ಬಸರಿಕಟ್ಟೆ: ರಾಮಕೃಷ್ಣ ಗುರುದಾಸರ ಸ್ಮಾರಕವಾಗಿ ಅವರ ಶಿಷ್ಯವೃಂದದಿಂದ ಇಲ್ಲಿನ ಸದ್ಗುರು ವಿದ್ಯಾ ಶಾಲೆಯಲ್ಲಿ ಪುರಂದರರ, ತ್ಯಾಗರಾಜರ ಆರಾಧನೆ ಜ. 18ರಂದು ನಡೆಯಿತು. ಬಿ. ಜನಾರ್ದನ ಭಟ್ ಕಾರ್ಯಕ್ರಮ ಉದ್ಘಾಟಿಸಿದರು ಆಕಾಶವಾಣಿ ಕಲಾವಿದೆಯರಾದ ಪ್ರಭಾವತಿ ಮೂರ್ತಿ ಮತ್ತು ಕಲ್ಯಾಣಿ ಗುರುದಾಸ್ ತ್ಯಾಗರಾಜರ, ಪುರಂದರರ ಕೀರ್ತನೆಗಳನ್ನು ಸುಶ್ರಾವ್ಯವಾಗಿ ಗಾಯನ ಮಾಡಿದರು.

ಸಿದ್ಧರಮಠದಲ್ಲಿ ಅಷ್ಟಬಂಧ

ಕೊಪ್ಪ: ಇಲ್ಲಿಗೆ ಸಮೀಪದ ಸಿದ್ಧರಮಠದಲ್ಲಿ ಪುನರ್ ನಿರ್ಮಾಣಗೊಂಡಿರುವ ಸಿದ್ಧೇಶ್ವರ ದೇವಾಲಯದಲ್ಲಿ ಅಷ್ಟಬಂಧ ಪ್ರತಿಷ್ಠಾಪನೆ ಜ. 31ರಂದು ನಡೆಯಲಿದ್ದು, ಜ. 29ರಿಂದ ಫೆ 1ರವರೆಗೆ ಈ ಸಂಬಂಧ ವಿವಿಧ ಪೂಜಾದಿಗಳು ನಡೆಯುತ್ತವೆ.

ಪೇಟೆ ಧಾರಣೆ

ಅಡಿಕೆ

ಶಿವಮೊಗ್ಗ : 25–1–1990
ಸರಕು : 3000–3840
ಬೆಟ್ಟೆ : 2200–2850
ಗೊರಬಲು : 1000–2020
ಸಾಗರ : 25.1.1990
ಇಡಿ : 2597–2719
ಚಾಲಿ : 2437–2667
ಆಪಿ : 3769–3919
ಸಿಪ್ಪೆ ಗೋಟು : 1086-1216

ಏಲಕ್ಕಿ

ಕೊಪ್ಪ : 21–1–1990
ರಾಶಿ : 300–350
ಆರಿಸಿದ್ದು (ದಪ್ಪ): 360–390

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ, ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.